ನನ್ನ ಕೋಮಲಾಂಗಿ ಕುರ್ಚಿ ಕುಸಿದು ಕುಳಿತಿದೆ. ಏನು ಮಾಡೋದು, ಆಡೋ ಹಾಗಿಲ್ಲ ಅನುಭವಿಸೋ ಹಾಗಿಲ್ಲ. ದಿನಕ್ಕೆ ನಾಲ್ಕೈದು ಬಾರಿ ಹಿಡಿಕೆ ಎಳೆದು, ಕುರ್ಚಿ ಎತ್ತರಿಸಿ ಸೋತು ಹೋದೆ. ಈಗ ರಿಪೇರಿ ಮಾಡುವವರ ಹುಡುಕಾಟ ಶುರುವಾಯ್ತು.

'ಅದು ಬಿಸಾಡಿ ವಂದ್ ಹೊಸಾದು ತಗೋರಿ ಸುಮ್ನ' ನಮ್ಮ ಪಾರ್ಟ್ನರಪ್ಪನ ಉವಾಚಕ್ಕೆ ಮೈಯೆಲ್ಲ ಉರಿದು ಹೋಗಿತ್ತು. ಅಂಗಡಿಗೇ ಹೊತ್ಕೊಯ್ದು ರಿಪೇರಿ ಮಾಡಿಸಿದರೆ, ಆ ರಿಕ್ಷಾ ಬಾಡಿಗೆ, ರಿಪೇರಿ ಖರ್ಚು ಎಲ್ಲ ಸೇರಿ ಹೊಸ ಕುರ್ಚಿಯ ಬೆಲೆಯೇ ಆದೀತು ಎಂದು ಹಿಂಜರಿದೆ. ಈಗ ಅನಿವಾರ್ಯವಾಗಿ ನಮ್ಮ ಹುಡುಗರಿಗೇ ಪೂಸಿ ಹೊಡೆಯತೊಡಗಿದೆ. 'ಯೇ ತಮ್ಮಾ, ಯಾರಾದ್ರೂ ಕುರ್ಚಿ ರಿಪೇರಿ ಮಾಡೋರನ್ನಾ ಹುಡುಕಿ ಕರ್ಕೊಂಡು ಬಾರಪಾ' ಅಂತ. ಹೂಂ ಅಂದವರು ಮರೆತೇ ಬಿಟ್ಟರೋ ಏನೋ. ಅಂತೂ ನನ್ನ ಪ್ರಾರ್ಥನೆ ಮೇಲಿನವನಿಗೆ ಕೇಳಿಸಿತು ಅನ್ನಿಸುತ್ತದೆ. ಒಂದು ಮುಂಜಾನೆ 'ರಿಪೇರಿ... ರಿಪೇರಿ... ಕುರ್ಚಿ ರಿಪೇರಿ' ಅಂತ ಕಿರುಚುತ್ತ, ಒಬ್ಬ ಕುರ್ಚಿ ರಿಪೇರಿಯವ ಆಫೀಸಿನೆದುರು ಪ್ರತ್ಯಕ್ಷ ಆಗಿಯೇ ಬಿಟ್ಟ!

ನನ್ನ ಸಂಭ್ರಮ ಹೇಳತೀರದು. ದಢಕ್ಕನೆದ್ದು ಹೊರ ನಡೆದು, ಸಕಲ ಮರ್ಯಾದೆಯಿಂದ ಆತನನ್ನು ಒಳಗೆ ಕರೆತಂದು, ನನ್ನ ಮುದ್ದಿನ ಕುರ್ಚಿಯತ್ತ ಕೈ ತೋರಿ, 'ಅಣ್ಣಾರ... ಅದು ಯಾಕೋ ಸೀಟು ಕೆಳಗ ಇಳೀತದ. ನೋಡ್ತೀರೇನ್ರಿ?' ಎಂದೆ. ಆತ ಮಾರು ದೂರ ನಿಂತು, ವಿವಿಧ ಭಂಗಿಯಲ್ಲಿ ಕುರ್ಚಿಯನ್ನು ಅವಲೋಕಿಸಿದವನೇ ದುಡುಕ್ಕನೆ ಮುಂದೆ ಹೋಗಿ, ಸರಕ್ಕನೆ ಕುರ್ಚಿಯ ಕೈ ಹಿಡಿದೆಳೆದು, ಅದನ್ನು ಪೂರಾ ಅಡ್ಡ ಕೆಡವಿ, ಭಡ್ ಭಡ್ ಎಂದು ಜಪ್ಪತೊಡಗಿದ. 'ಮೆಲ್ಲಗ್ರೀ ಮುರ್ದೀತು' ನಾನು ಸಂಕಟದಿಂದ ಎಚ್ಚರಿಸಿದೆ. 'ಅದು ಡೀಲಾ ಆಗೇತಿ ತಡೀರಿ' ಅಂದವನೇ ಬಡಿತ ಮುಂದುವರಿಸಿದ. ಅವನ ಹೊಡೆತಕ್ಕೆ ಅದರ ಹೊಟ್ಟೆಯೊಳಗಿನ ನರನಾಡಿಗಳೆಲ್ಲಾ (ಸ್ಕ್ರೂಗಳೆಲ್ಲ) ಫಳಫಳನೆ ಉದುರಿ ಬಿದ್ದು ಒದ್ದಾಡಿದವು. ಇವನೇನು ಮುರೀತಾನಾ? ರಿಪೇರಿ ಮಾಡ್ತಾನಾ? ಎಂಬ ಗೊಂದಲದಲ್ಲಿ ನಾನಿದ್ದೆ.

ಬೆಳ್ಳಂಬೆಳಗ್ಗೆ ಸರಿಯಾಗಿ 'ಪಾನಕ ಸೇವನೆ' ಮಾಡಿಕೊಂಡು ಬಂದಿದ್ದ ಆತ ಜೋಲಿ ಹೊಡೆಯುತ್ತಿದ್ದ ಪರಿಗೆ, ನಮ್ಮ ಹುಡುಗರು, 'ಡೀಲಾ ಆಗಿದ್ದು ಕುರ್ಚಿನೋ ಏನ್ ಇಂವಾನೋ' ಎಂದು ಕಮೆಂಟ್ ಪಾಸ್ ಮಾಡಿ, ಅವನ ಕೆಂಗಣ್ಣಿಗೆ ಗುರಿಯಾಗಿ ಗಪ್ಪಾದರು. ಅಂತೂ ತಾಸು ಹೊತ್ತು ಗುದ್ದಾಡಿ, ಅದೇನೋ ಕಿತ್ತು, ಬಡಿದು, ಜೋಡಿಸಿ ಕುರ್ಚಿಯನ್ನು ಒಂದು ಅವಸ್ಥೆಗೆ ತಂದಿಟ್ಟಿದ್ದ. ಹಾಗೇ ಸರಿಯಾಗಿ ದುಡ್ಡೂ ಪೀಕಿ ಹೋದ. ಈಗ ಕುರ್ಚಿ ತನ್ನ ಸಂಪೂರ್ಣ ಚಲನಶೀಲತೆಯನ್ನೇ ಕಳೆದುಕೊಂಡು ಕಲ್ಲು ಬೆಂಚಿನಂತಾಗಿತ್ತು. ಅದೇನು ಮಾಯ ಮಂತ್ರಮಾಡಿ ದಿಗ್ಬಂಧನ ಹಾಕಿದ್ದನೋ ಆತ. ಆದರೆ, ನನ್ನ ಮುದ್ದಿನ ಕುರ್ಚಿಯ ಮೋಹ ಮುಸುಕಿನಿಂದ ಹೊರಬರಲಾರದೇ, ಅದರ ಸಹವಾಸ ತೊರೆಯಲಾರದೇ ಅದರಲ್ಲೇ ಕುಳಿತು ಕೆಲಸ ಮಾಡತೊಡಗಿದ್ದೆ. ಆಗ ಶುರುವಾಯ್ತು ನೋಡಿ... ಭಯಂಕರ ಬೆನ್ನು ನೋವು.

ಡಾಕ್ಟರ್ ಹತ್ರ ಹೋಗಿ ಬೊಗಸೆಗಟ್ಟಲೆ ಗುಳಿಗೆ ನುಂಗಿದ್ದೇ ಬಂತು. ಯಾರೋ ಹೇಳಿದರು ಅಂತ ಎಕ್ಸರ್‌ಸೈಜ್ ಶುರುಮಾಡಿದ್ದಾಯ್ತು. ಪರಿಣಾಮ ಶೂನ್ಯ. ಕಡೆಗೊಂದು ದಿನ ನನಗೇ ಜ್ಞಾನೋದಯವಾಯಿತು. 'ಇದು ನನ್ನ ಹದಗೆಟ್ಟ ಕುರ್ಚಿ ಮಹಿಮೆ' ಎಂದು. ಅಂತೂ ಗಟ್ಟಿ ಮನಸ್ಸು ಮಾಡಿ, ಆ ಕುರ್ಚಿ ಮೋಡ್ಕಾವಾಲಾಗೆ ದಾಟಿಸಿ, ಮತ್ತೊಂದು 'ತಿರುಗುವ ಕುರ್ಚಿ' ತಂದು ನಿಟ್ಟುಸಿರುಬಿಟ್ಟೆ.

ಈಗ ಈ ಕುರ್ಚಿಯೂ ಮುದಿಯಾಯ್ತೋ ಏನೋ. ಮೆಲ್ಲಗೆ ಕಿರಿಕಿರಿ, ಪಿರಿಪಿರಿ ಶುರುವಿಟ್ಟುಕೊಂಡಿದೆ. ಹಾಗೇ ಆ ಕುರ್ಚಿಯಿಂದ ಈ ಕುರ್ಚಿಗೆ ವರ್ಗಾವಣೆ ಹೊಂದುತ್ತ ನನ್ನ ಮನಸ್ಸೂ ಮಾಗಿದೆ. ಒಣ ವ್ಯಾಮೋಹ ಕಳಚಿ, ವಾಸ್ತವದ ಅರಿವು ಮೂಡಿದೆ. 'ಈ ದೇಹವೇ ಕ್ಷೀಣಿಸಿ ಒಂದಿನ ಬಿದ್ದು ಹೋಗೋವಾಗ, ಜೀವವಿಲ್ಲದ ಕುರ್ಚಿ ಶಾಶ್ವತವೆ?' ಎಂಬ ಸಿದ್ಧಾಂತಕ್ಕೆ ಬದ್ಧಳಾಗಿ, ನಿರ್ಮೋಹಿಯಾಗುವ ಪ್ರಯತ್ನದಲ್ಲಿದ್ದೇನೆ.

ಪ್ರತಿಕ್ರಿಯಿಸಿ: feedback@sudha.co.in



# ದೀಪಾಕಾರದ ಮೆಟ್ಟಿಲು ಬಾವಿ

■ ರಮಣ್ ಶೆಟ್ಟಿ ರೆಂಜಾಳ್

ಸುಮಾರು 3 ಶತಮಾನಗಳಷ್ಟು ಹಳೆಯದಾದ ಈ ವಿಶಿಷ್ಟಾಕಾರದ ಮೆಟ್ಟಿಲು ಬಾವಿ ಇರುವುದು ಆಂಧ್ರ ಪ್ರದೇಶದಲ್ಲಿ. ಆಂಧ್ರದ ಪ್ರಕಾಶಂ ಜಿಲ್ಲೆಯ ಚಂದ್ರಶೇಖರಪುರಂನ 'ಮೈಲಚೆರ್ಲ' ಎಂಬ ಹಳ್ಳಿಯಲ್ಲಿರುವ ಈ ಬಾವಿಯ ವಿಶೇಷತೆ ಇದರ ರಚನೆ. ನೀರಿರುವ ಅಂತಸ್ತಿನವರೆಗೆ ಹತ್ತಿಳಿಯಲು ಇಳಿಜಾರಾದ ಉದ್ದನೆಯ ಮೆಟ್ಟಿಲುಗಳಿವೆ. ಸುತ್ತಲೂ ವಿಶಾಲವಾದ ಅಂಕಣಗಳಿವೆ. ಈ ರಚನೆಗಳು ದೀಪ ಅಥವಾ ಶಿವಲಿಂಗದ ಆಕಾರದಂತೆ ಗೋಚರಿಸುತ್ತವೆ.

ವಿನ್ಯಾಸ ವಿಶೇಷ



ವಿಶಿಷ್ಟ ವಿನ್ಯಾಸ ಮಾತ್ರವಲ್ಲ, ಸಾಕಷ್ಟು ನೀರು ಸಂಗ್ರಹಿಸುವ ಸಾಮರ್ಥ್ಯವನ್ನೂ ಹೊಂದಿರುವುದು ಇದರ ಹೆಗ್ಗಳಿಕೆ.

ಸ್ಥಳೀಯರ ಪ್ರಕಾರ, ವಾಸ್ತುಶಿಲ್ಪದ ಈ ಕೌತುಕವನ್ನು 'ಗಂದಿ ಸಹೋದರರು' ಎಂಬ ದನಗಾಹಿ ರೈತರೀರ್ವರು 300 ವರ್ಷಗಳ ಹಿಂದೆ ನಿರ್ಮಿಸಿರುವರು. ಅವರಿದನ್ನು ಭೈರವಕೋಣ ಎಂಬಲ್ಲಿಯ ಸ್ವಾಮೀಜಿಯೋರ್ವರ ಸಲಹೆ ಅನುಸಾರ ನಲ್ಲಮಲ್ಲ ಕಾನನ ಪ್ರದೇಶದಲ್ಲಿ ತೋಡಿದ್ದರು. ಕೆಲವು ವರ್ಷಗಳ ಹಿಂದೆ, ಕುಡಿಯುವ ನೀರಿಲ್ಲದೇ ಊರಿಗೆ ಊರೇ ಸಮಸ್ಯೆಯಲ್ಲಿ ಸಿಲುಕಿದಾಗ ಈ ಹಳ್ಳಿಗೆ ನೀರಿನಾಸರೆಯಾಗಿ ಒದಗಿಬಂದದ್ದು ಇದೇ ಪುರಾತನ ತೆರೆದ ಬಾವಿ. ಸುತ್ತಮುತ್ತಲಿನ ಪ್ರದೇಶಕ್ಕೆ ಇದೊಂದೇ ಸಾರ್ವಜನಿಕ ಕುಡಿಯುವ ನೀರಿನ ಮೂಲ. ಬೇಸಿಗೆಯಲ್ಲಿ ಬರಪೀಡಿತ ಗ್ರಾಮಗಳ ಮಹಿಳೆಯರು ದೂರದೂರದಿಂದ ನಡೆದು ಬಂದು ಈ ಮೆಟ್ಟಿಲು ಬಾವಿಯಿಂದ ಜಲ ತುಂಬಿಸಿಕೊಳ್ಳುತ್ತಾರೆ. ■